'ಸ್ಪೆಷಲ್ ಮೈಸೂರ್ ಪಾಕ್'ಗೆ
ಇಂದೇ ಭೇಟಿ ಕೊಡಿ
ನ್ಯೂ ಬಾಂಬೆ ಟಿಫಾನಿಸ್
NEW BOMBAY TIFFANYS
ನಮ್ಮ ವಿಶೇಷತೆಗಳು: ಹೊಸ ಹೊಸ ಬಗೆಯ ಬೆಂಗಾಲಿ ಸ್ವೀಟ್ಸ್, ಮಿಲ್ಕ್ ಕೇಕ್, ಶುದ್ಧ ತುಪ್ಪದಿಂದ ತಯಾರಿಸಿದ ಸಿಹಿ ಮತ್ತು ಖಾರಾ ತಿಂಡಿಗಳು
1771/3 ವಿಕ್ಟೋರಿಯಾ ಕಾಂಪ್ಲೆಕ್ಸ್, ಸಯ್ಯಾಜಿರಾವ್ ರಸ್ತೆ, ಮೈಸೂರು
Contact: : ಮನೀಶ್ ಕುಮಾರ್,
ಮೊ: 9845111886, 4287475

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

ಮಾಂಸಹಾರಿ ಪ್ರಿಯರಿಗೊಂದು ಸಿಹಿ ಸುದ್ದಿ
ಮಾಂಸಾಹಾರಿ (ನಾನ್-ವೆಜ್) ಫುಲ್ ಮೀಲ್ಸ್
ಪ್ರತಿದಿನ ಮಧ್ಯಾಹ್ನ 12.30 ರಿಂದ 4.00 ರವರೆಗೆ
ರೂ.125/-
ಮರಿಯಪ್ಪ ಮೆಸ್ (ಮಾಂಸಹಾರಿ)
ರಾಮಸ್ವಾಮಿ ಸರ್ಕಲ್ ಹತ್ತಿರ ಚಾಮರಾಜ ಜೋಡಿ ರಸ್ತೆ, ಮೈಸೂರು. 9448575079
ಫ್ಯಾಮಿಲಿಗೆ ಪ್ರತ್ಯೇಕ ಜಾಗವಿದೆ.

ಸಂಪುಟ: ೪೬ ಸಂಚಿಕೆ: ೨೪೬, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೨೨ ● ಅಷ್ಟಮಿ– ರೋಹಿಣಿ ಮೃಗ, ಬುಧವಾರ, ಸೆ.೧೩, ೨೦೧೭, ದೂರವಾಣಿ: ೨೪೪೫೫೦೧, ೨೪೪೫೫೦೪, ೨೪೪೫೫೦೫, ಫ್ಯಾಕ್ಸ್: ೨೪೪೫೫೦೩, ಪುಟ: ೧೨, ರೂ. ೩

# ಅಭೂತಪೂರ್ವ #ನಾನು ಗೌರಿ

## ಸಾಗರದಂತೆ ಹರಿದುಬಂದ ಜನಸಾಗರ; ರಾಷ್ಟ್ರಮಟ್ಟದ ಹೋರಾಟಗಾರರು ಭಾಗಿ



ನಾನು ಗೌರಿ-ಪ್ರತಿರೋಧ ಸಮಾವೇಶಕ್ಕೆ ದೇಶದ ವಿವಿಧೆಡೆಯಿಂದ ಸಾವಿರಾರು ಹೋರಾಟಗಾರರು, ಚಿಂತಕರು, ಜನಸಾಮಾನ್ಯರು ಆಗಮಿಸಿದ್ದರು. ಮಂಗಳವಾರ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯ ಫ್ಲೈಓವರ್ ಮೇಲೆ ಚಿತ್ರಪತ್ರ ಹಿಡಿದು ಸಾಗಿಬಂದ ಜನಸಾಗರ ಕಂಡಿದ್ದು ಹೀಗೆ...

ಬೆಂಗಳೂರು,ಸೆ.೧೨– ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಖಂಡಿಸಿ ಗೌರಿ ಹತ್ಯೆ ಪ್ರತಿರೋಧ ಸಮಿತಿ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ #ನಾನು ಗೌರಿ ಸಮಾವೇಶ ಅಭೂತಪೂರ್ವವಾಗಿತ್ತು.

ನಗರದ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ #ನಾನು ಗೌರಿ: ಬೃಹತ್ ಪ್ರತಿರೋಧ ಸಮಾವೇಶ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸಾಗಿಬಂದ ಬೃಹತ್ ಪ್ರತಿಭಟನಾ ರ್‍ಯಾಲಿಗೆ ಭಾರೀ ಸಂಖ್ಯೆಯಲ್ಲಿ ವಿಚಾರವಾದಿಗಳು, ಸಾಹಿತಿಗಳು, ಸಾಮಾಜಿಕ ಹೋರಾಟಗಾರರು, ವಿದ್ಯಾರ್ಥಿಗಳು, ಯುವಜನರು ಕೈಜೋಡಿಸಿದ್ದರು. ೧೦ ಸಾವಿರಕ್ಕೂ ಅಧಿಕ ಜನರು ಸಮಾವೇಶ ಮತ್ತು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

'ನಾನು ಗೌರಿ' ಪ್ರತಿರೋಧ ಸಮಾವೇಶವು ಕರ್ನಾಟಕ ಸೇರಿದಂತೆ ದೇಶದ ವಿವಿಧ ಕಡೆಗಳಲ್ಲಿ ನಡೆದಿರುವ ವಿಚಾರವಾದಿಗಳ ಹತ್ಯೆ ಕುರಿತು ವಿಶ್ವಸಂಸ್ಥೆಗೆ ದೂರು ನೀಡಲು ಮಹತ್ವದ ನಿರ್ಣಯ ಕೈಗೊಂಡಿತು.

- ವಿಚಾರವಾದಿಗಳ ಸರಣಿ ಹತ್ಯೆ ಖಂಡಿಸಿ ವಿಶ್ವಸಂಸ್ಥೆಗೆ ದೂರು: ಸಮಾವೇಶದಲ್ಲಿ ಮಹತ್ವದ ನಿರ್ಣಯ
- ಕಪ್ಪುಕೊಡೆ, ಕಪ್ಪು ಪಟ್ಟಿಯೊಂದಿಗೆ ಬೃಹತ್ ಮೆರವಣಿಗೆ
- ವಾರದೊಳಗೆ ಹಂತಕರ ಪತ್ತೆಯಾಗದಿದ್ದರೆ ಹೋರಾಟ ತೀವ್ರ

ವಿಚಾರವಾದಿಗಳಾದ ಗೋವಿಂದ ಪನ್ಸಾರೆ, ನರೇಂದ್ರ ದಾಬೋಲ್ಕರ್, ಪ್ರೊ. ಎಂ.ಎಂ. ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಕುಟುಂಬದವರು ವಿಶ್ವಸಂಸ್ಥೆಗೆ ದೂರು ನೀಡಬೇಕೆಂಬ ಪ್ರಸ್ತಾಪವನ್ನು ಪ್ರತಿರೋಧ ಸಮಾವೇಶದ ವೇದಿಕೆಯಲ್ಲಿ ಹೋರಾಟಗಾರರು ಮಂಡಿಸಿದಾಗ ಸಭಿಕರು ಸಮ್ಮತಿಸಿದರು.

ಇದಕ್ಕೂ ಮುನ್ನ ನಗಾರಿ ಬಾರಿಸುವ ಮೂಲಕ ಸಮಾವೇಶಕ್ಕೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರು ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ 'ಗೌರಿ ಲಂಕೇಶ್' ಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

**ಜನಸಾಗರ:** ಪತ್ರಕರ್ತೆ, ಸಾಮಾಜಿಕ ಹೋರಾಟಗಾರ್ತಿ, ಪ್ರಗತಿಪರ ಚಿಂತಕಿ ಗೌರಿ ಲಂಕೇಶ್ ಹತ್ಯೆ ಖಂಡಿಸಿ ಸಮಾವೇಶಕ್ಕೆ ಭಾರೀ ಜನಸಾಗರವೇ ಹರಿದು ಬಂದಿತ್ತು.

⏭ ೯

ನಾವು ಗೌರಿ ಲಂಕೇಶ್ ಅವರನ್ನು ಕಳೆದು ಕೊಂಡಿಲ್ಲ, ಪ್ರಜಾ ಪ್ರಭುತ್ವವನ್ನೇ ಕಳೆದು ಕೊಂಡಿದ್ದೇವೆ. ಗುಂಡಿನಿಂದ ಕೊಲ್ಲುವುದು ಭಾರತೀಯ ವೈಚಾರಿಕತೆ ಅಲ್ಲ. ಸಮಾಜದಲ್ಲಿ ಸಮಾನತೆ ಬಯಸುವವರು ಹತರಾಗುತ್ತಿದ್ದಾರೆ.
–ಸೀತಾರಾಂ ಯಚೂರಿ, ಸಿಪಿಎಂ ಮುಖಂಡ

ಗೌರಿ ಲಂಕೇಶ್ ಹತ್ಯೆ ನಾಗರಿಕ ಸಮಾಜ ತಲೆ ತಗ್ಗಿಸುವಂಥ ಕೃತ್ಯ. ಅಭಿವ್ಯಕ್ತಿ ಸ್ವಾತಂತ್ರ್ಯ ಹರಣದ ಕೆಲಸ. ಇದು ತೊಲಗಬೇಕು. ರಾಜ್ಯದಲ್ಲಷ್ಟೇ ಅಲ್ಲ, ದೇಶದೆಲ್ಲೆಡೆ ಇಂಥ ಕೃತ್ಯಗಳು ನಡೆಯುತ್ತಿವೆ. ಇದನ್ನು ನಾವೆಲ್ಲರೂ ಖಂಡಿಸಲೇಬೇಕು. ಪ್ರಜಾಪ್ರಭುತ್ವ ವಿರೋಧಿ ಧೋರಣೆ ವಿರುದ್ಧ ನಾವೆಲ್ಲ ಧ್ವನಿ ಎತ್ತದಿದ್ದರೆ ಸರ್ವಾಧಿಕಾರಿ ಧೋರಣೆ ತಲೆ ಎತ್ತುತ್ತದೆ. ಗೌರಿ ಹಂತಕರನ್ನು ವಾರದೊಳಗೆ ಬಂಧಿಸಬೇಕು.
–ಬಿ.ಟಿ.ಲಲಿತಾನಾಯಕ್, ಮಾಜಿ ಸಚಿವೆ

# ಹಂತಕರು, ಪ್ರೇರಕರನ್ನು ಶೀಘ್ರ ಪತ್ತೆ ಹಚ್ಚಿ

## ಬೃಹತ್ ರ್‍ಯಾಲಿಯಲ್ಲಿ 'ಬಹುಮುಖಿ ಭಾರತ' ಹೋರಾಟಗಾರರ ಒತ್ತಾಯ

ಮೈಸೂರು,ಸೆ.೧೨– ಸಂವಿಧಾನಬದ್ಧ ಅಭಿವ್ಯಕ್ತಿ ಸ್ವಾತಂತ್ರ್ಯ, ಧರ್ಮನಿರಪೇಕ್ಷತೆ, ವೈಚಾರಿಕ ಮನೋಭಾವಗಳನ್ನು ಅತ್ಯಂತ ನಿಖರ, ನಿಷ್ಠುರ ಮತ್ತು ಪ್ರಖರವಾಗಿ ತಮ್ಮ ಕೃತಿ, ಬರವಣಿಗೆ, ಭಾಷಣ, ಪತ್ರಿಕೆ ಮೂಲಕ ವ್ಯಕ್ತಪಡಿಸುತ್ತಿದ್ದ ಹಿರಿಯ ಸಂಶೋಧಕ ಡಾ.ಎಂ.ಎಂ.ಕಲಬುರ್ಗಿ, ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆ ಬರ್ಬರ ಮತ್ತು ಅಮಾನವೀಯ ಕೃತ್ಯ. ಈ ಹತ್ಯೆ ಹಿಂದೆ ಇರುವವರನ್ನು ತ್ವರಿತವಾಗಿ ಪತ್ತೆ ಹಚ್ಚಿ, ಹತ್ಯೆಗೆ ಪ್ರೇರೇಪಿಸಿದವರನ್ನು ಶಿಕ್ಷಿಸಬೇಕು ಎಂದು 'ಬಹುಮುಖಿ ಭಾರತ' ವೇದಿಕೆ ಒತ್ತಾಯಿಸಿದೆ.

ಮೈಸೂರು ಪ್ರಗತಿಪರರ ಒಕ್ಕೂಟ ಮಂಗಳವಾರ ಆಯೋಜಿಸಿದ್ದ ಪ್ರತಿಭಟನಾ ಮೆರವಣಿಗೆ ನಂತರ ಒಕ್ಕೂಟದ ಅಧ್ಯಕ್ಷ ಸಮಾಜವಾದಿ ಚಿಂತಕ ಪ.ಮಲ್ಲೇಶ್ ಅವರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯದ ಗೃಹ ಸಚಿವರಿಗೆ ಮನವಿಪತ್ರ ಸಲ್ಲಿಸಿ, ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಇಂತಹ ಹತ್ಯೆಗಳನ್ನು ಸಾರಾಸಗಟಾಗಿ ಖಂಡಿಸುತ್ತೇವೆ. ಇಂಥ ಕೃತ್ಯಗಳು ಮರುಕಳಿಸದಂತೆ ಮುಂಜಾಗ್ರತಾ ಕ್ರಮ ಕೈಗೊಂಡು ಸಂವಿಧಾನದ ಆಶಯಗಳನ್ನು ನಿರ್ಭೀತಿಯಿಂದ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಬೇಕು. ಸಮಾಜದ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಬೇಕು ಎಂದು ಮನವಿ ಮಾಡಿದರು.

**೨ ಸಾವಿರಕ್ಕೂ ಅಧಿಕ ಹೋರಾಟಗಾರರ ಬೃಹತ್ ಮೆರವಣಿಗೆ**

ಇದಕ್ಕೂ ಮುನ್ನ ಪ್ರತಿಭಟನೆಯಲ್ಲಿ ಮಾತನಾಡಿದವರು, ಪತ್ರಕರ್ತೆ ಗೌರಿ ಲಂಕೇಶ್ ಅವರು ಸಂವಿಧಾನಬದ್ಧ ಅಭಿವ್ಯಕ್ತಿ ಸ್ವಾತಂತ್ರ್ಯ, ಧರ್ಮನಿರಪೇಕ್ಷತೆ, ವೈಚಾರಿಕ ಮನೋಭಾವವನ್ನು ಅತ್ಯಂತ ನಿಖರ, ಪ್ರಖರ ಮತ್ತು ನಿಷ್ಠುರವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಇವರ ಹತ್ಯೆ ಅಮಾನವೀಯ. ಹಂತಕರನ್ನು ಪತ್ತೆ ಹಚ್ಚಿ, ಹತ್ಯೆಗೆ ಪ್ರೇರೇಪಿಸಿದವರನ್ನು ಶಿಕ್ಷಿಸಬೇಕು ಎಂದು ಒತ್ತಾಯಿಸಿದರು.

⏭ ೯




ಗೌರಿ ಲಂಕೇಶ್ ಹತ್ಯೆ ಖಂಡಿಸಿ ಬಹುಮುಖಿ ಭಾರತ ಸಂಘಟನೆ ಮಂಗಳವಾರ ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಎಂ.ಎನ್.ಸುಮನಾ, ಪುಷ್ಪಾ ಅಮರ್‌ನಾಥ್, ಪ.ಮಲ್ಲೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಇಡೀ ರಾಷ್ಟ್ರಕ್ಕೆ ಇದು ಅತ್ಯಂತ ಕಷ್ಟದ ಕಾಲ. ಕೋಟ್ಯಂತರ ಜನರ ತ್ಯಾಗ ಬಲಿದಾನದಿಂದ ಗಳಿಸಿದ ಸ್ವಾತಂತ್ರ್ಯ ಈಗ ಅಪಾಯದ ಅಂಚಿನಲ್ಲಿದೆ. ನಾವು ಎಚ್ಚೆತ್ತುಕೊಳ್ಳದೇ ಇದ್ದರೆ ವಿಚಾರವಂತರ, ಹೋರಾಟಗಾರರ, ಸಾಮಾಜಿಕ ಕಳಕಳಿಯಿಂದ ಕೆಲಸ ಮಾಡುವ ಹಲವರ ಕೊಲೆ ನಡೆಯುತ್ತಲೇ ಹೋಗಬಹುದು. ಇದನ್ನು ತಪ್ಪಿಸೋಣ. ಪ್ರಜಾಪ್ರಭುತ್ವ ಉಳಿಸೋಣ.
–ಪ.ಮಲ್ಲೇಶ್, ಅಧ್ಯಕ್ಷರು, ಪ್ರಗತಿಪರ ಸಂಘಟನೆಗಳ ಒಕ್ಕೂಟ

ನನ್ನ ಮಗಳು ಗೌರಿ ಇಂಜಿನಿಯರ್ ಆಗಬೇಕೆಂದು ನನಗೆ ಆಸೆಯಿತ್ತು. ಆದರೆ ಆಕೆ ಪತ್ರಿಕೋದ್ಯಮ ಆರಿಸಿಕೊಂಡಳು. ಆಕೆ ನನ್ನ ಮಗಳು ಗೌರಿಯಲ್ಲ. ನಿಮ್ಮೆಲ್ಲರ ಗೌರಿ.
–ಇಂದಿರಾ ಲಂಕೇಶ್

ಬೇಟಿ ಬಚಾವೊ–ಬೇಟಿ ಪಡಾವೊ ಎಂದು ಘೋಷಣೆ ಮಾಡಿ. ಆಕೆ ಹೆಚ್ಚು ಮಾತನಾಡಿದರೆ ಗುಂಡಿಟ್ಟು ಹೊಡೆದುರುಳಿಸಿ (ಬೇಟಿ ಬಚಾವೊ–ಬೇಟಿ ಪಡಾವೊ, ಅಗರ್ ಬೇಟಿ ಜ್ಯಾದ ಪಡೀ, ಜ್ಯಾದ ಬೋಲಿ...ತೊ...ಬೇಟಿಕೋ ಗೋಲಿಸೆ ಉಡಾವೊ).
–ಸಾಗರಿಕಾ ಘೋಷ್

ಗೌರಿ ಹತ್ಯೆಯನ್ನು ಸಂಘ ಪರಿವಾರದವರು ಮಾಡಿದ್ದಾರೆಂದು ಆರೋಪಿಸಿದ್ದಕ್ಕೆ ನೋಟಿಸ್ ನೀಡಲಾಗಿದೆ. ೧೨೦ ಕೋಟಿ ನೋಟಿಸ್ ಸಿದ್ಧಪಡಿಸಿಕೊಳ್ಳಲಿ. ಎಲ್ಲದಕ್ಕೂ ಕಾನೂನು ಪ್ರಕಾರವೇ ಉತ್ತರ ನೀಡುತ್ತೇವೆ.
–ಕೆ. ನೀಲಾ, ಹೋರಾಟಗಾರ್ತಿ

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 393
ದೂರವಾಣಿ: 2425156

# ವೀರಶೈವ–ಲಿಂಗಾಯತ ಒಂದೇ

## ಸಿದ್ಧಗಂಗಾ ಮಠದಿಂದ ಪತ್ರಿಕಾ ಹೇಳಿಕೆ ಬಿಡುಗಡೆ

ಬೆಂಗಳೂರು,ಸೆ.೧೨– ಲಿಂಗಾಯತ ಸ್ವತಂತ್ರ ಧರ್ಮ ಸ್ಥಾನಮಾನದ ಬೇಡಿಕೆಯ ಹೋರಾಟದಲ್ಲಿ ಗೊಂದಲ ಮುಂದುವರಿದಿದೆ. ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ್, ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ನಡುವೆ ವಾಗ್ಯುದ್ಧ ನಡೆದಿದೆ.



ಲಿಂಗಾಯತ ಪದದ ಮೇಲೆಯೇ ಧರ್ಮ ಪ್ರತ್ಯೇಕತೆ ಹೋರಾಟಕ್ಕೆ ಶ್ರೀ ಶಿವಕುಮಾರ ಸ್ವಾಮೀಜಿ ಬೆಂಬಲ ನೀಡಿದ್ದಾರೆಂದು ಸಚಿವ ಎಂ.ಬಿ. ಪಾಟೀಲ್ ೨ ದಿನಗಳ ಹಿಂದೆ ಹೇಳಿಕೆ ನೀಡಿದ್ದು ದೊಡ್ಡ ತಿರುವು ನೀಡಿತು. ವೀರಶೈವ–ಲಿಂಗಾಯತ ಎರಡೂ ಒಂದೇ ಎಂದು ಪ್ರತಿಪಾದಿಸುತ್ತಿರುವವರಲ್ಲಿ ಗೊಂದಲ ಮೂಡಿಸಿತು. ಆದರೆ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಕಾರ್ಯದರ್ಶಿ ಈಶ್ವರ ಖಂಡ್ರೆ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿದ ನಂತರ ಶ್ರೀಮಠದಿಂದ ಪತ್ರಿಕಾ ಹೇಳಿಕೆ ಬಿಡುಗಡೆಯಾಗಿದೆ.

⏭ ೮

### ಸುಳ್ಳು ಹೇಳಿದ್ದರೆ ನನ್ನ ಕುಟುಂಬ ನಾಶವಾಗಲಿ

ವಿಜಯಪುರ: ಲಿಂಗಾಯತ ಧರ್ಮ ಸ್ವತಂತ್ರವಾಗಬೇಕು ಎಂದು ಸಿದ್ಧಗಂಗಾ ಶ್ರೀಗಳು ಹೇಳಿರೋದು ಸತ್ಯ. ನಾನು ಏನನ್ನು ಕೇಳಿದ್ದೇನೋ, ನೋಡಿದ್ದೇನೋ ಅದನ್ನೇ ಹೇಳಿದ್ದೇನೆ ಎಂದು ಸಚಿವ ಎಂ.ಬಿ.ಪಾಟೀಲ್ ಪ್ರತಿಪಾದಿಸಿದ್ದಾರೆ.



ಇಲ್ಲಿ ಮಂಗಳವಾರ ಮಾತನಾಡಿದ ಅವರು, ಶ್ರೀಗಳು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಸ್ಪಷ್ಟವಾಗಿ ಅರ್ಥೈಸಿಕೊಂಡಿದ್ದೇನೆ. ಶ್ರೀಗಳು ಹೇಳೋದನ್ನ ನಮ್ಮ ಜತೆಗಿದ್ದವರು ರೆಕಾರ್ಡ್ ಮಾಡುತ್ತಿದ್ದರು. ಆರಾಧ್ಯ ಎನ್ನುವ ಮಠದ ವ್ಯಕ್ತಿ ರೆಕಾರ್ಡ್ ಮಾಡದಂತೆ ಸೂಚಿಸಿದರು. ಅದಕ್ಕಾಗಿ ರೆಕಾರ್ಡ್ ಮಾಡಲಿಲ್ಲ ಎಂದು ಸಚಿವರು ವಿವರಿಸಿದರು.

⏭ ೯

ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಳ ೩

ಯುವ ಸಂಭ್ರಮದಲ್ಲಿ ಮೇಳೈಸಿದ ಸಾಂಸ್ಕೃತಿಕ ಸೊಬಗು ೩

ಎಐಎಡಿಎಂಕೆಯಿಂದ ಶಶಿಕಲಾ ಉಚ್ಚಾಟನೆ ೩

**ಮಾಜಿ ಸಚಿವ ಪಳನಿಯಪ್ಪನ್ ಫೋರ್ಜರಿ ಪ್ರಕರಣ**

# ಕೊಡಗಿನಲ್ಲಿ ತ.ನಾಡು ಪೊಲೀಸರಿಂದ ಶೋಧ

ಮಡಿಕೇರಿ/ಸುಂಟಿಕೊಪ್ಪ,ಸೆ.೧೨– ಫೋರ್ಜರಿ ಪ್ರಕರಣದಲ್ಲಿ ಭಾಗಿಯಾದ ಆರೋಪ ಹೊತ್ತಿರುವ ತಮಿಳುನಾಡಿನ ಮಾಜಿ ಸಚಿವ ಪಳನಿಯಪ್ಪನ್‌ಗಾಗಿ ಅಲ್ಲಿನ ಪೊಲೀಸರು ಮಂಗಳವಾರ ಕೊಡಗು ಜಿಲ್ಲೆಯ ವಿವಿಧೆಡೆ ಹುಡುಕಾಟ ನಡೆಸಿದ್ದಾರೆ.



ಜಿಲ್ಲೆಯ ಸುಂಟಿಕೊಪ್ಪ ಸಮೀಪದ ತೊಂಡೂರಿನಲ್ಲಿರುವ ಖಾಸಗಿ ರೆಸಾರ್ಟ್‌ನಲ್ಲಿ ತಮಿಳುನಾಡು ಬಂಡಾಯ ಶಾಸಕರ ವಾಸ್ತವ್ಯ ಮುಂದುವರೆದಿದ್ದು, ಮಂಗಳವಾರ ಚೆನ್ನೈನಿಂದ ಆಗಮಿಸಿದ ಪೊಲೀಸರು ಏಕಾಏಕಿ ರೆಸಾರ್ಟ್ ಮೇಲೆ ದಾಳಿ ನಡೆಸಿ ಪಳನಿಯಪ್ಪನ್‌ಗಾಗಿ ಶೋಧ ನಡೆಸಿದರು.

೧೭ ಶಾಸಕರು ಈ ರೆಸಾರ್ಟ್‌ಗೆ ಆಗಮಿಸಿದ್ದು, ಇವರ ಜೊತೆಗಿದ್ದ ಮಾಜಿ ಸಚಿವ ಪಳನಿಯಪ್ಪನ್ ಮೇಲೆ ಫೋರ್ಜರಿ ಪ್ರಕರಣ ದಾಖಲಾಗಿದ್ದು, ತನಿಖೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದರು ಎನ್ನಲಾಗಿದೆ.

⏭ ೯

Wednesday13 Septembar 2017
ಆಂದೋಲನ ಸುದ್ದಿಗಾಗಿ
andolana@gmail.com

22 ಕ್ಯಾರೆಟ್ ಚಿನ್ನದ ದರ
ತೊಳಸಿ
₹2810
1 ಗ್ರಾಂಗೆ
ಹಿಂದಿನ ದಿನದ ದರ
THOLASI JEWELS
ಅಶೋಕ ರೋಡ್, ಮೈಸೂರು
Ph: 2521926, 2441926